ದಿನಾಂಕಃ 30-08-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಎಲ್ ಆರ್ ಆರ್ ವಕೀಲರಿಂದ**

23) ಅಂದಿನ ತಿಲಕ್ ಪಾರ್ಕ್ ಸಿಪಿಐ ರವರು ಮೆಮೋ ನೀಡಿ ನನಗೆ ವಿಕಾಸ್ ಅಲಿಯಾಸ್ ವಿಕ್ಕಿ ಎನ್ ಇಪಿ ಎಸ್ ಪೊಲೀಸ್ ಠಾಣೆಯ ಪ್ರಕರಣಕ್ಕೆ ಬೇಕಾಗಿದ್ದರಿಂದ ಪತ್ತೆ ಹಚ್ಚುವಂತೆ ಮೆಮೋ ನೀಡಿದ್ದರು. ದಿ 06-12-2020 ರಂದು ಸದರಿ ಮೆಮೋವನ್ನು ಸ್ವೀಕರಿಸಿದ್ದೇನೆ . ನಮ್ಮ ಠಾಣಾ ದಿನಚರಿಯಲ್ಲಿ ನಮ್ಮ ಕರ್ತವ್ಯದ ಬಗ್ಗೆ ನಮೂದು ಮಾಡುತ್ತೇವೆ. ಸದರಿ ಠಾಣಾ ದಿನಚರಿಯಲ್ಲಿ ನನಗೆ ಮೆಮೋ ಕೊಟ್ಟ ನಂತರ ಅದನ್ನು ದಿನಚರಿಯಲ್ಲಿ ನಮೂದು ಮಾಡಿ ಸ್ಥಳಕ್ಕೆ ಹೋಗಿರುತ್ತೇನೆ . ನನಗೆ ಮೆಮೋವನ್ನು ಸುಮಾರು ರಾತ್ರಿ 12.30 ಯಿಂದ 1 ಗಂಟೆ ಸಮಯದಲ್ಲಿ ನೀಡಿರುತ್ತಾರೆ . ದಿ 06-12-2020 ಬಾತ್ಮಿದಾರರಿಂದ ಬೆಳಗ್ಗೆ 5 ಗಂಟೆಯ ಸಮಯದಲ್ಲಿ ಬಂದ ಮಾಹಿತಿಯ ಬಗ್ಗೆ ಠಾಣಾದಿನಚರಿಯಲ್ಲಿ ನಮೂದು ಮಾಡಿರುವುದಿಲ್ಲ. ನಾನು ದೂರನ್ನು ನೀಡುವ ವೇಳೆ ಅಂಜನೇಯ ಸ್ವಾಮಿ ದೇವಸ್ಥಾನದ ಬಳಿ ಇರುವ ಸಮುದಾಯ ಭವನ ಎಂದು ನಮೂದು ಮಾಡಿದ್ದೇನೆ, ಆದರೆ ಅದರ ಮಾಲೀಕತ್ವದ ಬಗ್ಗೆ ನಮೂದು ಮಾಡಿಲ್ಲ. ನಮ್ಮ ತಂಡದಲ್ಲಿ ಇದ್ದ ಚಾಸಾ-2 ರಿಂದ 4 ರವರು ಶಂಕಿತ ಆರೋಪಿಯನ್ನು ಬೆನ್ನು ಹತ್ತಿದ್ದೇವು , ಆ ಸಮಯದಲ್ಲಿ ನಾನು ಸಮವಸ್ತ್ರದಲ್ಲಿ ಇದ್ದೆ , ಒಬ್ಬ ಸಿಬ್ಬಂದಿ ಮಫ್ತಿಯಲ್ಲಿ ಇದ್ದರು, ಉಳಿದ ಇಬ್ಬರು ಸಮವಸ್ತದಲ್ಲಿ ಇದ್ದರು. ನಾನು ಮತ್ತು ಪರಮೇಶ್ವರ್ ರವರು ಸಮವಸ್ತ್ರದಲ್ಲಿ ಇದ್ದೇವು. ಮುನಾಫರ್ ಪಾಷ ಮಫ್ತಿಯಲ್ಲಿ ಇದ್ದರು.

24) ನಾವು ಸುಮಾರು 10-15 ಅಡಿ ದೂರದಿಂದ ಜೀಪ್ ಇಳಿದ ಸಮಯದಲ್ಲಿ ಶಂಕಿತ ಆರೋಪಿ ಸಮುದಾಯ ಭವನದಿಂದ ಈಚೆ ಬಂದನು, ಆಗ ನಮ್ಮನ್ನು ನೋಡಿ ಓಡಲು ಪ್ರಾರಂಭಿಸಿದನು. ಚಾಸಾ-2 ರವರು ಸುಮಾರು 5-6 ಅಡಿಯಲ್ಲಿ ಶಂಕಿತ ಆರೋಪಿಯನ್ನು ಬೆನ್ನತ್ತಿದರು. ಚಾಸಾ-2 ರವರು ಆ ಸಮಯದಲ್ಲಿ ಸಮವಸ್ತ್ರದಲ್ಲಿ ಇರಬಹುದು ಆದರೆ ನನಗೆ ನಿಖರವಾಗಿ ನೆನಪಿಲ್ಲ .

25) ಸಾಮಾನ್ಯವಾಗಿ ಒಬ್ಬ ವ್ಯಕ್ತಿ ಮತ್ತೊಬ್ಬ ವ್ಯಕ್ತಿಯನ್ನು ಸುಮಾರು 5-6 ಅಡಿಯಲ್ಲಿ ಹಲ್ಲೆ ಮಾಡಲು ಆಗುವುದಿಲ್ಲ ಅಂದರೆ ಸರಿಯಲ್ಲ . ಒಬ್ಬ ವ್ಯಕ್ತಿಯನ್ನು ಬೆನ್ನಟ್ಟುವ ಸಮಯದಲ್ಲಿ ಯಾವ ವ್ಯಕ್ತಿಯನ್ನು ಬೆನ್ನಟ್ಟುತ್ತಿರುತ್ತಿವೋ ಆತ ಮುಂದೆ ಹೋಗುತ್ತಿರುತ್ತಾನೆ . ಚಾಸಾ-2 ರವರು ಶಂಕಿತ ಆರೋಪಿತನನ್ನು 1 ಅಡಿ ಅಂತರದಲ್ಲಿ ಬೆನ್ನತ್ತುವ ಸಮಯದಲ್ಲಿ ಶಂಕಿತ ಆರೋಪಿತನು ಚಾಸಾ-2 ರವರಿಗೆ ಹಲ್ಲೆ ಮಾಡಿದನು. 5-6 ಅಂತರದಲ್ಲಿ ಇರುವ ವ್ಯಕ್ತಿ ಈ ರೀತಿಯಾಗಿ ಹಲ್ಲೆ ಮಾಡಲು ಸಾಧ್ಯವಿಲ್ಲ ಅಂದರೆ ಸರಿಯಲ್ಲ. ಹಲ್ಲೆ ಮಾಡುವ ಸಮಯದಲ್ಲಿ ಶಂಕಿತ ಆರೋಪಿತನಿಗೂ ಮತ್ತು ಚಾಸಾ-2 ರವರಿಗೆ ಎಷ್ಟು ಅಂತರವಿತ್ತು ಎಂದು ನನಗೆ ಈಗ ಜ್ಞಾಪಕವಿಲ್ಲ . ಸರ್ವೇ ಸಾಮಾನ್ಯವಾಗಿ ಯಾವುದೇ ಪ್ರಕರಣದಲ್ಲಿಯಾಗಲಿ ಗಾಯಳುವಿನ ಫೋಟೋವನ್ನು ತೆಗೆದು ಹಾಜರುಪಡಿಸುತ್ತೇವೆ ಅಂದರೆ ಸರಿ. ನಾನು ಶಂಕಿತ ಆರೋಪಿಯನ್ನು 5 ಅಡಿ ಅಂತರದಿಂದ ಹಿಡಿಯಲು ಪ್ರಯತ್ನಿಸಿದೆ. ಆ ಸಮಯದಲ್ಲಿ ಚಾಸಾ-2 ರವರು ನನ್ನ ಮುಂದೆಯೇ ಇದ್ದರು . ಚಾಸಾ-3 ರವರು ನನ್ನ ಸಮಾನಾಂತರದ ಬಲಗಡೆ ಇದ್ದರು. ದಿ 06-12-2020 ರಂದು ತಮ್ಮ ಸರ್ವೀಸ್ ರಿವಲ್ವರ್ ನಲ್ಲಿ 5 ರೋಂಡ್ಸ್ ನ್ನು ಲೋಡ್

ಮಾಡಿದ್ದೇನು . ಸದರಿ ದಿನ 2 ಗುಂಡುಗಳನ್ನು ಬಳಸಿರುತ್ತೇನೆ . 9 ಎಂ ಎಂ ಪಿಸ್ತೂಲ್ ಇರುತ್ತದೆ . ಸದರಿ ಪಿಸ್ತೂಲ್ ನ ಕಿಲ್ಲಿಂಗ್ ರೇಜ್ 25 ಮೀಟರ್ ಗಳಷ್ಟು ದೂರ ಇರುತ್ತದೆ. ತುಂಬಾ ಅಂತರದಲ್ಲಿ ಶೂಟ್ ಮಾಡಿದರೆ ಒಳಹಾದುಹೋಗಿ ಹೊರಹೋಗುವ ಸಾಧ್ಯತೆ ಇರುತ್ತದೆ ಅಂದರೆ ಇರಬಹುದು . ಕಾಲಿಗೆ ಗುಂಡುಹಾರಿಸಿದ ವೇಳೆಯಲ್ಲಿ ಒಳಗೆ ಹೋಗಿ ಹೊರಗೆ ಹಾದು ಹೋಗುವ ಸಾಧ್ಯತೆ ಕಡಿಮೆ ಅಂದರೆ ನನಗೆ ಹೇಳಲು ಆಗುವುದಿಲ್ಲ. ನಾನು ಸುಮಾರು 10 ಅಡಿ ಅಂತರದಿಂದ ಶಂಕಿತ ಆರೋಪಿತಿನಿಗೆ ಗುಂಡು ಹಾರಿಸಿರುತ್ತೇನೆ. ನನ್ನನ್ನು ಹೊರತುಪಡಿಸಿ ಬೇರೆ ಯಾರು ಶೂಟ್ ಮಾಡಿರುವುದಿಲ್ಲ. ಸರ್ವೇ ಸಾಮಾನ್ಯವಾಗಿ ಯಾವುದೇ ವ್ಯಕ್ತಿಯನ್ನು ಶೂಟ್ ಮಾಡಬೇಕಾದರೆ ಮೇಲಾಧಿಕಾರಿಗಳ ಅಪ್ಪಣೆ ಬೇಕಾಗುತ್ತದೆ ಅಂದರೆ ಸರಿಯಲ್ಲ . ಸಾಕ್ಷಿ ಮುಂದುವರೆದು ಆತ್ಮರಕ್ಷಣೆಗಾಗಿ ಮಾಡಬಹುದು. ಶಂಕಿತ ಆರೋಪಿತನು ಕುಸಿದು ಬಿದ್ದ ಸಮಯದಲ್ಲಿ ನಾನೇ ಹೋಗಿ ನೋಡಿದೆನು. ನನ್ನ ಜೊತೆಗೆ ನಮ್ಮ ಸಿಬ್ಬಂದಿಯು ಸಹ ಬಂದರು. ನಾನು ನೋಡಿದಾಗ ರಕ್ತಸ್ರಾವ ಆಗಿತ್ತು. ಬುಲೆಟ್ ಹೊರಹಾದು ಹೋಗಿರುವ ಬಗ್ಗೆ ನಾನು ಪರಿಶೀಲನೆ ಮಾಡಿರುವುದಿಲ್ಲ. ನಾನು ಶೂಟ್ ಮಾಡಿದ ತಕ್ಷಣ ಬೆಳಗಿನ ಜಾವ 5.20 ರಿಂದ 5.35 ರಒಳಗೆ ವೈರ್ ಲೇಸ್ ರವರಿಗೆ ಮಾಹಿತಿ ನೀಡಿರುತ್ತೇನೆ . ನಾನು ಠಾಣೆಗೆ ಪೋನ್ ಮಾಡಿ ತಿಳಿಸಿರುವುದಿಲ್ಲ. ಕಂಟ್ರೋಲ್ ಮಾಡಿಸಿರುತ್ತೇನೆ. ಸದರಿ ವಿಚಾರವನ್ನು ನಾನು ಠಾಣಾ ದಿನಚರಿಯಲ್ಲಿ ನಮೂದು ಮಾಡಿರುವುದಿಲ್ಲ ಅಂದರೆ ಸರಿ .

26) ಆ ಸಮಯದಲ್ಲಿ ಪರಮೇಶ್ವರ್ ರವರಿಗೆ ಎಡಗೈನ ಭುಜಕ್ಕೆ ಶಂಕಿತ ಆರೋಪಿತನು ಡ್ರ್ಯಾಗರ್ ನಿಂದ ಗಾಯಪಡಿಸಿರುತ್ತಾನೆ . ಶೂಟ್ ಮಾಡಿದ ನಂತರ

ಗಾಯಳುವಿನ ಮತ್ತು ಶಂಕಿತ ಆರೋಪಿತನದ್ದು ಪೋಟೋ ತೆಗೆದಿರುವುದಿಲ್ಲ. ಅವರಿಬ್ಬರಿಗೂ ಪ್ರಜ್ಞಾವಸ್ಥೆ ಇತ್ತು. ಚಾಸಾ-2 ರವರು ದೂರನ್ನು ಆಗಲಿ ಮತ್ತು ಹೇಳಿಕೆ ಕೊಡುವ ಸ್ಥಿತಿಯಲ್ಲಿ ಇದ್ದರು ಸಹ ಅವರು ಕೊಟ್ಟಿರುವುದಿಲ್ಲ ಕಾರಣ ಅವರು ಒಳರೋಗಿಯಾಗಿ ಇದ್ದರು. ಉಳಿದ ಸಿಬ್ಬಂದಿಗಳಿಗೆ ಯಾವುದೇ ಏಟಾಗಿಲ್ಲ ಅಂದರೆ ಸರಿ. ಶಂಕಿತ ಆರೋಪಿತನು ಬಲಾಢ್ಯನಲ್ಲ ಅಂದರೆ ಸರಿಯಲ್ಲ . ನಾವು ಶಂಕಿತ ಆರೋಪಿಯನ್ನು ಹಿಡಿಯಲು ಹೋದಾಗ 5 ಜನ ಇದ್ದು , ಮರಳಿ ಬರುವಾಗ 6 ಜನ ಇದ್ದೇವು. ನಾವು ಶಂಕಿತ ಆರೋಪಿಗೆ ಗಾಯವಾಗಿದ್ದರಿಂದ ಜೀಪ್ ನ ಮಧ್ಯದ ಸೀಟ್ ನಲ್ಲಿ ಆ ಕಡೆ ಈ ಕಡೆ ಸಿಬ್ಬಂದಿ ಕೂರಿಸಿ ಆರೋಪಿಯನ್ನು ಮಲಗಿಸಿದ್ದೇವು. ಜೀಪ್ ನ ಹಿಂಬದಿಯ ಸೀಟ್ ನಲ್ಲಿ ಪರಮೇಶ್ವರ್ ನನ್ನು ಕೂರಿಸಿದೆವು. ನಮ್ಮ ಇಲಾಖೆಯವರು ಸಾಮಾನ್ಯವಾಗಿ ಪ್ರಥಮ ಚಿಕಿತ್ಸಾ ಪೆಟ್ಟಿಗೆ ಇಟ್ಟುಕೊಳ್ಳಬೇಕು ಅಂದರೆ ಸರಿ. ಆ ಸಮಯದಲ್ಲಿ ಶಂಕಿತ ಆರೋಪಿಗೆ ಪ್ರಥಮ ಚಿಕಿತ್ಸೆಯನ್ನು ನೀಡಿರುವುದಿಲ್ಲ. ಸಾಕ್ಷಿ ಮುಂದುವರೆದು ಆತನಿಗೆ ಹೆಚ್ಚಿನ ರಕ್ತಸ್ರಾವ ಆಗಿದ್ದರಿಂದ ಆತನನ್ನು ತುರ್ತಾಗಿ ಆಸ್ಪತ್ರೆಗೆ ಕರೆದುಕೊಂಡು ಬಂದೆವು. ಘಟನಾ ಸ್ಥಳದಿಂದ ಆಸ್ಪತ್ರೆಗೆ 7-8 ಕಿ.ಮೀ ದೂರವಿರುತ್ತದೆ. ಹೆಚ್ಚಿನ ರಕ್ತಸ್ರಾವ ಆದರೆ ಪ್ರಜ್ಞಾವಸ್ಥೆ ಇರುವುದಿಲ್ಲ ಅಂದರೆ ಇರಬಹುದು. ಆರೋಪಿತನಿಗೂ ಹೆಚ್ಚಿನ ರಕ್ತಸ್ರಾವ ಆಗುತ್ತಿತ್ತು ಅಂದರೆ ಸರಿ. ಗುಂಡು ಹಾರಿಸಿದ ತಕ್ಷಣ ಹಾದು ಹೋದ ಗುಂಡು ಎಲ್ಲಿ ಹೋಯಿತು ಎಂದು ಗಮನಿಸಲಿಲ್ಲ, ಕಾರಣ ಶಂಕಿತ ಆರೋಪಿತನ ಜೀವರಕ್ಷಣೆಯಾಗಿತ್ತು, ಹಾಗಾಗಿ ಬುಲೆಟ್ ಎಲ್ಲಿ ಬಿದ್ದಿತ್ತು ಎಂದು ನಾನು ಗಮನಿಸಿರುದಿಲ್ಲ . ಸದರಿ ಸಮಯದಲ್ಲಿ ನಮ್ಮ ಇಲಾಖಾ ಜೀಪ್ ನ ಚಾಲಕ ಮಂಜುನಾಥ್ ರವರು ಆಗಿದ್ದರು. ಶಂಕಿತ ಆರೋಪಿಯನ್ನು ನಾನೇ ಆಸ್ಪತ್ರೆಗೆ ದಾಖಲು

ಮಾಡಿರುತ್ತೇನೆ . ಆ ಸಮಯದಲ್ಲಿ ಶಂಕಿತ ಆರೋಪಿತನು ನೋವಿನಿಂದ ನರಳುತ್ತಿದ್ದ ಕಾರಣ ಹೇಳಿಕೆ ಪಡೆದಿರುವುದಿಲ್ಲ. ಶಂಕಿತ ಆರೋಪಿಯನ್ನು ಆಸ್ಪತ್ರೆಗೆ ದಾಖಲೆ ಮಾಡಿದ ನಂತರ ಆಸ್ಪತ್ರೆಯಲ್ಲಿ ಇರುವ ಪೊಲೀಸ್ ರು ಅಲ್ಲಿಗೆ ಬಂದರು. ಆರೋಪಿತನು ಹೇಳಿಕೆ ಕೊಡುವ ಸ್ಥಿತಿಯಲ್ಲಿ ಇರಲಿಲ್ಲ. ಆ ಸಮಯದಲ್ಲಿ ಪೋಟೋ ಮತ್ತು ವಿಡಿಯೋ ತೆಗೆದಿರುವುದಿಲ್ಲ.

27) ನಾನು ಠಾಣೆಯಲ್ಲಿ ದೂರು ನೀಡಿದ ಸಮಯ ಬೆಳಗ್ಗೆ ಸುಮಾರು 6.30 ಸಮಯವಾಗಿತ್ತು, ಆಗ ನಾನು ಮತ್ತು ನನ್ನ ತನಿಖಾ ಸಹಾಯಕರು , ಮೂರ್ತಿ ಇದ್ದೇವು. ದೂರನ್ನು ಗ್ರಾಮಾಂತರ ಪೊಲೀಸ್ ಠಾಣೆಗೆ ಬಂದಾಗ ನಾನು ಹೇಳಿದ ಪ್ರಕಾರ ಟೈಪ್ ಮಾಡಿರುತ್ತಾರೆ. ಸಾಕ್ಷಿಯು ಡ್ರ್ಯಾಗರ್ ನ್ನು ನೋಡಿ ಗುರುತಿಸಿದ್ದು ಇದನ್ನು ಈಗಾಗಲೇ ಮುಮಾ5 ಎಂದು ಗುರುತಿಸಲಾಗಿದೆ. ಸದರಿ ಡ್ರ್ಯಾಗರ್ ಗುಜರಿ ಅಂಗಡಿಗಳಲ್ಲಿ ಸಿಗಬಹುದು ಅಂದರೆ ಸರಿ .

28) ಸ್ಥಳ ಪಂಚನಾಮೆಯ ಸಮಯದಲ್ಲಿ ನನ್ನೊಂದಿಗೆ , ತಿಪಟೂರು ಡಿ ವೈ ಎಸ್ ಪಿ ಚಂದನ್ ಕುಮಾರ್ ರವರು ಹಾಗೂ ಇಬ್ಬರು ಪಂಚರು ಇದ್ದರು. ನಾವು ಸ್ಥಳಕ್ಕೆ ಹೋಗುವಷ್ಟರಲ್ಲಿ ತುಮಕೂರು ಗ್ರಾಮಾಂತರ ಪೋಲೀಸರು ಅಲ್ಲಿ ಇದ್ದರು. ಸದರಿ ಜಾಗದಲ್ಲಿ ಶ್ರೀನಿವಾಸ್ , ಎಫ್ ಎಸ್ ಎಲ್ ಎಕ್ಸ್ ಪರ್ಟ್ ಬಂದಿದ್ದರು. ಘಟನೆ ನಡೆದ ನಂತರ ಘಟನ ಸ್ಥಳ ಭದ್ರಪಡಿಸಲು ನಾನು ಯಾವುದೇ ಸಿಬ್ಬಂದಿಯನ್ನು ನೇಮಕ ಮಾಡಿಲ್ಲ. ಸಾಕ್ಷಿ ಮುಂದುವರೆದು ಸದರಿ ಸ್ಥಳವು ತುಮಕೂರು ಗ್ರಾಮಾಂತರ ಠಾಣಾ ವ್ಯಾಪ್ತಿಗೆ ಬಂದಿರುತ್ತದೆ,ಸದರಿ ಠಾಣಾಧಿಕಾರಿಗಳು ಸಿಬ್ಬಂದಿಯನ್ನು ನೇಮಕ ಮಾಡಿ

ಭದ್ರಪಡಿಸಿದ್ದರು. ಸ್ಥಳ ಪಂಚನಾಮೆ ಮಾಡುವ ಸಮಯದಲ್ಲಿ ಸ್ಥಳೀಕರು ಯಾರು ಇರಲಿಲ್ಲ. ನಿಪಿ-3 ರಲ್ಲಿ ಇರುವ ಘಟನಾ ಸ್ಥಳದ ಮಾಲೀಕರು ಯಾರು ಎಂದು ನನಗೆ ಗೊತ್ತಿಲ್ಲ. ಪಂಚನಾಮೆಯನ್ನು ತನಿಖಾಧಿಕಾರಿಗಳ ಸಹಾಯಕರಾದ ಗಂಗಾಧರಗೌಡ ಎಂಬುವರು ಬರೆದರು. ಸದರಿ ಪಂಚನಾಮೆಯನ್ನು ಅವರ ಕೈಬರವಣಿಗೆಯಲ್ಲಿ ಬರೆದಿರುತ್ತಾರೆ ಅಂದರೆ ಸರಿ. ಸ್ಥಳ ಪಂಚನಾಮೆಯನ್ನು ಮಾಡುವ ಸಮಯದಲ್ಲಿ ಪೋಟೋಗ್ರಾಫಿ ಮತ್ತು ವಿಡಿಯೋ ಗ್ರಾಫಿ ಮಾಡಿರುತ್ತಾರೆ. ಸ್ಥಳ ಪಂಚನಾಮೆ ಮಾಡುವ ಸಮಯದಲ್ಲಿ ಆರೋಪಿ ಇದ್ದ ಸ್ಥಳವನ್ನು ತೋರಿಸಿರುತ್ತೇನೆ, ಪೋಟೋ ಇದ್ದು ಅದನ್ನು ಗುರುತು ಮಾಡಿರುವುದಿಲ್ಲ.

( ಈ ಹಂತದಲ್ಲಿ ಆರೋಪಿ ಪರ ವಕೀಲರ ವಿನಂತಿಯಮೇರೆಗೆ ಮುಂದುವರೆದ ಪಾಟೀ ಸವಾಲಿಗಾಗಿ ಮುಂದೂಡಲಾಯಿತು. )

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ

2 ನೇಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ತುಮಕೂರು.